ಊ) ಈ ಕೆಲಸಕ್ಕಾಗಿ 5.62 ಲಕ್ಷ ರೂ.ಗಳು ಬಿಡುಗಡೆಯಾಗಿದ್ದು, ಈ ಮೊತ್ತವು ಖರ್ಚಾಗಿರುತ್ತದೆ.

ಋ) ಈ ಕೆರೆ ನಿರ್ಮಾಣ ಕೆಲಸವನ್ನು ಮೊದಲು ಡಿ.ಪಿ.ಎ.ಪಿ. ಯೋಜನೆಯಡಿಯಲ್ಲಿ 1985-86 ರಲ್ಲಿ ಕೈಗೆತ್ತಿಕೊಳ್ಳಲಾಯಿತು. ನಂತರ ಈ ಕೆಲಸವನ್ನು ಈ ಯೋಜನೆಯಡಿಯಲ್ಲಿ ಕೈಬಿಟ್ಟ ಕಾರಣ ಕೆಲಸವು ಸ್ಥಗಿತಗೊಂಡಿತ್ತು. ನಂತರ 1992-93ನೇ ಸಾಲಿನಲ್ಲಿ ಈ ಕೆಲಸವನ್ನು 4702 ಸಣ್ಣ ನೀರಾವರಿ ಯೋಜನೆ ಲೆಕ್ಕ ಶೀರ್ಷಿಕೆಯಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ಋ) 1997-98ನೇ ಸಾಲಿಗೆ ಈ ಕೆಲಸಕ್ಕಾಗಿ 0.71 ಲಕ್ಷ ರೂ.ಗಳ ಅನುದಾನವಿದೆ. ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಎಲ್ಲಾ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು.

ದ. ಕನ್ನಡ ಜಿಲ್ಲೆಯ ಪೋಲೀಸ್ ಠಾಣೆಗಳ ಕುರಿತು

2390- ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ವಿವಿಧ ಪೋಲೀಸ್ ಠಾಣೆಗಳ ಸಂಖ್ಯೆ ಎಷ್ಟು ಮತ್ತು ಇಲ್ಲಿರುವ ವಿವಿಧ ವರ್ಗಗಳ ಸಿಬ್ಬಂದಿಗಳ ಸಂಖ್ಯೆ ಎಷ್ಟು?

ಆ) ಕಳೆದ 4 ವರ್ಷಗಳಿಂದಲೂ ಹೆಚ್ಚಾಗಿ ಒಂದೇ ಪೊಲೀಸ್ ಸ್ಟೇಷನ್‌ನಲ್ಲಿ ಕೆಲಸ ನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಗಳ ಸಂಖ್ಯೆ ಎಷ್ಟು?

ಇ) ಇವರ ವರ್ಗಾವಣೆಗಳಾಗಿ ಸರಕಾರ ಯಾವ ಮಾನದಂಡ ಅಳವಡಿಸಲಾಗಿದೆ.?

ಈ) ಉಳ್ಳಾಲ ವಿಧಾನ ಸಭಾಕ್ಷೇತ್ರದಲ್ಲಿ ಬರುವ ಪೊಲೀಸ್ ಠಾಣೆಯಲ್ಲಿ ಕಳೆದ 4-5 ವರ್ಷಗಳಿಗಿಂತಲೂ ಹೆಚ್ಚಾಗಿ ಇರುವ ಪೊಲೀಸ್ ಸಿಬ್ಬಂದಿಗಳನ್ನು ವರ್ಗಾವಣೆ ಮಾಡದಿರಲು ಕಾರಣವೇನು?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ವಿವಿಧ ಪೊಲೀಸ್ ಠಾಣೆಗಳ ಸಂಖ್ಯೆ ಒಟ್ಟು 45 (ರೈಲ್ವೆ ಪೊಲೀಸ್ ಠಾಣೆ ಒಂದು ಸೇರಿದಂತೆ) ಇಲ್ಲಿರುವ ವಿವಿಧ ಸಿಬ್ಬಂದಿಗಳ ಸಂಖ್ಯೆಯನ್ನು ಈ ಕೆಳಗೆ ಕಾಣಿಸಿದೆ.

ಪೊಲೀಸ್ ಇನ್ಸ್‌ಪೆಕ್ಟರ್ (ಎಸ್‌ಹೆಚ್‌ಒ)	-	5
ಪೊಲೀಸ್ ಸಬ್-ಇನ್ಸ್‌ಪೆಕ್ಟರ್	-	53
ಸಹಾಯಕ ಪೊಲೀಸ್ ಸಬ್ ಇನ್ಸ್‌ಪೆಕ್ಟರ್	-	101
ಹೆಡ್ ಕಾನ್ಸ್‌ಟೇಬಲ್	-	342

ಮಹಿಳಾ ಹೆಡ್ ಕಾನ್ಸ್‌ಟೇಬಲ್	-	20
ಪೊಲೀಸ್ ಕಾನ್ಸ್‌ಟೇಬಲ್	-	958
ಮಹಿಳಾ ಪೊಲೀಸ್ ಕಾನ್ಸ್‌ಟೇಬಲ್	-	34
ಒಟ್ಟು	-	**1513**

ಆ) ಕಳೆದ 4 ವರ್ಷಗಳಿಂದಲೂ ಹೆಚ್ಚಾಗಿ ಒಂದೇ ಪೊಲೀಸ್ ಠಾಣೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ 449

ಇ) ಒಂದೇ ಸ್ಥಳದಲ್ಲಿ ಮೂರು ವರ್ಷಕ್ಕೆ ಮೇಲ್ಪಟ್ಟು ಸೇವೆ ಸಲ್ಲಿಸುತ್ತಿರುವ ಸರ್ಕಾರಿ ನೌಕರರುಗಳಿಗೆ ಬೇರೆ ಸ್ಥಳಕ್ಕೆ ವರ್ಗಾವಣೆ ಮಾಡಬಹುದು ಎಂಬ ನಿಯಮವಿದೆ.

ಈ) ಸಾರ್ವತ್ರಿಕ ವರ್ಗಾವಣೆಗಳನ್ನು 1996-97 ಹಾಗೂ 1997-98ರ ಸಾಲಿಗೆ ಮಾಡಬಾರದಾಗಿ ಸರ್ಕಾರದ ನೀತಿ ಇರುವುದರಿಂದ, ಯಾವ ವರ್ಗಾವಣೆಗಳನ್ನು ಮಾಡಿಲ್ಲ.

ಸೊರಬ ತಾಲ್ಲೂಕಿನಲ್ಲಿ ಮೂಡಿ ಏತ ನೀರಾವರಿ ಯೋಜನೆ

2392 - ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸೊರಬ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1991-92ನೇ ಸಾಲಿನಲ್ಲಿ ಸೊರಬ ತಾಲ್ಲೂಕಿನಲ್ಲಿ ಮೂಡಿ ಏತ ನೀರಾವರಿ ಯೋಜನೆ, ಮೂಗೂರು ಏತ ನೀರಾವರಿ ಯೋಜನೆ, ಗುಡವಿ ಏತ ನೀರಾವರಿ ಯೋಜನೆ ಮತ್ತು ಕಟ್ಟೆಹಳ್ಳ (ತಲಗುಂದ್ರಿ) ಏತ ನೀರಾವರಿ ಯೋಜನೆಗಳು ಮಂಜೂರಾಗಿ ಕಾಮಗಾರಿಯು ಪ್ರಾರಂಭದ ಹಂತದಲ್ಲಿದ್ದು ಇತ್ತೀಚೆಗೆ ಕಾಮಗಾರಿಯನ್ನು ಸ್ಥಗಿತಗೊಳಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಬಂದಿದ್ದಲ್ಲಿ ಯಾವ ಕಾರಣಗಳಿಂದ ಕಾಮಗಾರಿಗಳನ್ನು ಸ್ಥಗಿತಗೊಳಿಸಲಾಗಿದೆ?*

ಇ) *ಹಾಗಿದ್ದಲ್ಲಿ ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು? ಈ ಮೇಲ್ಕಂಡ ಪ್ರಶ್ನೆಯನ್ನು ಕಳೆದ ವಿಧಾನ ಸಭಾ ಅಧಿವೇಶನದಲ್ಲಿ ಕೇಳಲಾಗಿತ್ತು (ದಿನಾಂಕ :25-3-97) ಸದರಿ ಕಾಮಗಾರಿಗಳಿಗೆ ಕಾಮಗಾರಿಗಳ ಅಂದಾಜು ವೆಚ್ಚದ ಮೂರನೇ ಒಂದು ಭಾಗದಷ್ಟು ಹಣವನ್ನು ಕೂಡಲೇ ಬಿಡುಗಡೆ ಮಾಡುವುದಾಗಿ ಸಂಬಂಧಪಟ್ಟ ಮಂತ್ರಿಗಳಿಂದ ಭರವಸೆಯನ್ನು ನೀಡಲಾಗಿತ್ತು. ಆದರೆ ಸದರಿ ಕಾಮಗಾರಿಗಳಿಗೆ ಇದುವರೆವಿಗೂ ಸಹ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ. ತಾಲ್ಲೂಕಿನ ರೈತರ ಹಿತದೃಷ್ಟಿಯಿಂದ ಹಣವನ್ನು ಬಿಡುಗಡೆ ಮಾಡಲು ಸರ್ಕಾರವು ಕೂಡಲೇ ಕ್ರಮಕೈಗೊಳ್ಳುವುದೇ?*